1505(1769) ಶ್ರೀ ಶಿವರಾಜ ಸಜ್ಜನರ್ (ಹಾವೇರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಿನಾಂಕ 29-12-2005ರಂದು ಜರುಗಿದ ಕರ್ನಾಟಕ ರಾಜ್ಯ ಬೀಜ ನಿಗಮದ ಸರ್ವಸದ್ಯಸರ ಸಭೆಯಲ್ಲಿ ಉದ್ದು ಖರೀದಿಯಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಷೇರುದಾರರು ಸಿ.ಒ.ಡಿ ತನಿಖೆಗೆ ಒತ್ತಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಆ) ಬಂದಿದ್ದಲ್ಲಿ ಈ ಬಗ್ಗೆ ಜರುಗಿಸಲಾದ ಕ್ರಮವೇನು?

ಶ್ರೀ ಕೆ. ಶ್ರೀನಿವಾಸಗೌಡ ಕೃಷಿ ಸಚಿವರು:

ಅ) ಹೌದು.

ಆ) ಕರ್ನಾಟಕ ರಾಜ್ಯ ಬೀಜ ನಿಗಮದ ಆಡಳಿತ ಮಂಡಳಿಯು ಈ ವಿಷಯವನ್ನು ಪರಿಶೀಲಿಸುತ್ತದೆ ಮತ್ತು ವಾಸ್ತವಾಂಶಗಳ ಆಧಾರದ ಮೇಲೆ ಸೂಕ್ತಕ್ರಮವನ್ನು ಕೈಗೊಳ್ಳುತ್ತದೆ.

1506(1767) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 1994 ರಿಂದ 99 ರ ಅವಧಿಯಲ್ಲಿ ರೈತರು ಪಡೆಯುವ ಯಾವುದೇ ಕೃಷಿ ಸಾಲಕ್ಕೆ ಮುದ್ರಾಂಕ ಶುಲ್ಕದ ರಿಯಾಯಿತಿ ನೀಡಿರುವುದು ನಿಜವೇ:

ಆ) ಹಾಗಿದ್ದಲ್ಲಿ, ಈಗ ಆ ರಿಯಾಯಿತಿಯನ್ನು ನಿಲ್ಲಿಸಿ ಶುಲ್ಕ ವಿಧಿಸಿದ್ದು ಸರಿಯೆ:

ಇ) ಹಾಗಿದ್ದಲ್ಲಿ, ಎಷ್ಟು ಹಣವನ್ನು ಈ ರೀತಿ ಪಡೆಯಾಲಾಗುತ್ತಿದೆ:

ಈ) ಈ ಶುಲ್ಕ ರೈತರಿಗೆ ದುಬಾರಿಯಾಗುತ್ತಿರುವುದರಿಂದ ಒಂದು ಲಕ್ಷ ರೂಪಾಯಿ ಸಾಲದವರೆಗೆ ರಿಯಾಯಿತಿ ಕೊಡಲು ರೈತರ ಬೇಡಿಕೆ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೆ:

ಉ) ಹಾಗಿದ್ದಲ್ಲಿ, ಎಂದಿನಿಂದ ನೀಡಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):

ಅ) ರೈತರು, ಎಲ್ಲಾ ವಿತ್ತ ಸಂಸ್ಥೆಗಳಿಂದ ಪಡೆಯುವ ಯಾವುದೇ ಮೌಲ್ಯದ ಕೃಷಿ ಸಾಲಕ್ಕೆ ಸಂಪೂರ್ಣ ಮುದ್ರಾಂಕ ಶುಲ್ಕ ವಿನಾಯಿತಿಯನ್ನು ಸರ್ಕಾರ ನೀಡಿರುತ್ತದೆ. ಈ ಯೋಜನೆಯಡಿಯಲ್ಲಿ ಎಲ್ಲಾ ರೈತರು ಸೇರಿರುತ್ತಾರೆ. ವಿತ್ತ ಸಂಸ್ಥೆಗಳ ಪರಿಭಾಷೆಯಲ್ಲಿ, ವಾಣಿಜ್ಯ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ಸ್ಥಳೀಯ ಗ್ರಾಮೀಣ ಬ್ಯಾಂಕುಗಳು, PCARDB ಇವುಗಳು ಬರುತ್ತವೆ.

ಆ) ದಿನಾಂಕ: 1.4.2003 ರಿಂದ ಇತರೇ ಎಲ್ಲಾ ರೀತಿಯ ಮುದ್ರಾಂಕ ಶುಲ್ಕದ ರಿಯಾಯಿತಿಯನ್ನು ನಿಲ್ಲಿಸಲಾಗಿದೆ. 1-4-2003ರಿಂದ ಶುಲ್ಕದ ದರಗಳನ್ನು ಇಳಿಸಲಾಗಿದೆ. 1-4-2003ರ ಪೂರ್ವದಲ್ಲಿ ಆಧಾರ ಪತ್ರಗಳಿಗೆ ಶೇಕಡಾ 3%ರಷ್ಟು ಶುಲ್ಕ ವಿಧಿಸಲಾಗುತ್ತಿತ್ತು. ಇದನ್ನು 0.5% ಕ್ಕೆ ಇಳಿಸಲಾಗಿದೆ. ಒಂದು ಲಕ್ಷ ರೂ. ಸಾಲ ಪಡೆಯಲು ಮುದ್ರಾಂಕ ಶುಲ್ಕ 0.5% ಹಾಗೂ ನೋಂದಣಿ ಶುಲ್ಕ 0.5% ಸೇರಿದಂತೆ ರೂ.1000/- ಆಗುತ್ತದೆ.

ಇ) 2003-04ನೇ ಸಾಲಿನ ಆರ್ಥಿಕ ವರ್ಷದಲ್ಲಿ ರಿಯಾಯಿತಿಯನ್ನು ಹಿಂತೆಗೆದುಕೊಂಡಿದ್ದು ರೂ.9,26,31,845/- ರಾಜಸ್ವ ವಸೂಲಾಗಿರುತ್ತದೆ.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.